ದಿನಾಂಕ 01.08.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆಃ- 3ನೇ ಎದುರುದಾರರ ಪರ ವಕೀಲರಾದ ಶ್ರೀ. ಎ.ಬಿ. ರವರಿಂದಃ-**

ನಾನು ಈ ಅರ್ಜಿಯಲ್ಲಿ 3ನೇ ಎದುರುದಾರರ ಕಂಪನಿಯ ಆಡಳಿತಾತ್ಮಕ ಅಧಿಕಾರಿಯಾಗಿದ್ದು, ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರವನ್ನು ಈ ದಿನ ನ್ಯಾಯಾಲಯದಲ್ಲಿ ಸಲ್ಲಿಸಿದ್ದು, ಅದರಲ್ಲಿರುವ ಅಂಶಗಳು ಸತ್ಯವಾಗಿವೆ.

ಆಥರೈಶೇಷನ್ ಲೆಟರ ಅನ್ನು ಹಾಜರುಪಡಿಸುತ್ತಿದ್ದು ಅದನ್ನು ನಿಶಾನೆ ಆರ್. 2 ಎಂದು, ವಿಮಾ ಪಾಲಿಸಿಯನ್ನು ಹಾಜರುಪಡಿಸುತ್ತಿದ್ದು, ಅದನ್ನು ನಿಶಾನೆ ಆರ್. 3 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ** 1ನೇ ಮತ್ತು 2ನೇ ಎದುರುದಾರರ ಪರ ವಕೀಲರಾದ ಶ್ರೀ.ಕೆ.ಜಿ.ಎ.ರವರಿಂದಃ

ಅಪಘಾತಪಡಿಸಿದ ವಾಹನದ ನೋಂದಣಿ ಸಂಖ್ಯೆ ಕೆ.ಎ-45-ಎಂ-0038 ಎಂದರೆ ಸರಿ. ನಿಶಾನೆ ಆರ. 2 ಪ್ರಕಾರ ಅಪಘಾತಪಡಿಸಿದ ವಾಹನಕ್ಕೆ ವಿಮೆಯು ದಿಃ 15.12.2016 ರಿಂದ ದಿಃ 14.12.2017 ರವರೆಗೆ ಚಾಲ್ತಿಯಲ್ಲಿತ್ತು ಎಂದರೆ ಸರಿ. ಅಪಘಾತವಾದ ಸಂದರ್ಭದಲ್ಲಿ ಅಪಘಾತಪಡಿಸಿದ ವಾಹನವನ್ನು ಮೂರೇರಾ ಗಣಪತಿ ಯಾನೆ ಪೊನ್ನುರವರು ಚಲಾಯಿಸುತ್ತಿದ್ದರು ಎಂದರೆ ಸರಿ. ಅಪಘಾತದ ಸಂದರ್ಭದಲ್ಲಿ ಅಪಘಾತಪಡಿಸಿದ ವಾಹನವನ್ನು ಮೂರೇರಾ ಗಣಪತಿ ಯಾನೆ ಪೊನ್ನು ಬಿನ್ ಬೋಜಪ್ಪ ರವರು

ಚಲಾಯಿಸುತ್ತಿದ್ದರು ಎಂಬ
ಪ್ರಶ್ನೆಗೆ ಸಾಕ್ಷಿಯು ದೋಷರೋಪಣಾ ಪಟ್ಟಿಯಲ್ಲಿ ಚಾಲಕನ ಹೆಸರು ಮೂರೇರಾ ಗಣಪತಿ ಯಾನೆ ಪೊನ್ನು ಬಿನ್ ತಿಮ್ಮಯ್ಯ ಎಂದು ನಮೂದಾಗಿದೆ ಎಂದು ಉತ್ತರಿಸಿರುತ್ತಾರೆ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

(ಸಾಕ್ಷಿದಾರರ ಸಹಿ) ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು
ವಿರಾಜಪೇಟೆ.